627 (712) ಶ್ರೀ ಗೊಪಾಲ ಪೂಜಾರಿ ಕೆ. (ಬೈಂದೂರು): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೈಂದೂರು ವಿಶೇಷ ತಹಶೀಲ್ದಾರ್ ಕಛೇರಿಯು ಬಾಡಿಗೆ ಕಟ್ಟಡದಲ್ಲೇ ನಡೆಯುತ್ತಿರುವುದರಿಂದ ಸ್ವಂತ ಕಟ್ಟಡ ನಿರ್ಮಾಣ ಮಾಡುವ ವಿಚಾರವು ಸರ್ಕಾರದ ಗಮನದಲ್ಲಿದೆಯೇ;

ಆ) ಹಾಗಿದ್ದಲ್ಲಿ, ಈ ಪ್ರಸ್ತಾವನೆಯು ಈಗ ಯಾವ ಹಂತದಲ್ಲಿದೆ;

ಇ) ವಿಶೇಷ ತಹಶೀಲ್ದಾರ್ ವ್ಯಾಪ್ತಿ ತೀರಾ ಹಿಂದುಳಿದ ಗುಡ್ಡಗಾಡು ಹಾಗೂ ನಕ್ಸಲೈಟ್ ಪ್ರದೇಶಗಳಿಂದ ಕೂಡಿದ್ದು, ಇವರ ಪ್ರಯಾಣಕ್ಕೆ ಅವಶ್ಯ ಸರ್ಕಾರಿ ವಾಹನ (ಜೀಪ್) ನೀಡುವ ಪ್ರಸ್ತಾವನೆಯು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಇವರಿಗೆ ಯಾವಾಗ ವಾಹನವನ್ನು ನೀಡಲಾಗುವುದು?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು) :

ಅ) ಹೌದು.

ಆ) ಸರ್ಕಾರದ ಪರಿಶೀಲನೆಯಲ್ಲಿದೆ.

ಇ) ಜೀಪ್ ಖರೀದಿಸಲು ತಗಲುವ ವೆಚ್ಚಕ್ಕಾಗಿ ಅನುದಾನವನ್ನು ಆರ್ಥಿಕ ಇಲಾಖೆಯವರು ಒದಗಿಸಬೇಕಾಗಿದೆ. ಆರ್ಥಿಕ ಸಾಲದ 2006–07ನೇ ಆಯವ್ಯಯದ ಬಿಲ್ ಸದನದ ಅನುಮೋದನೆ ನಿರೀಕ್ಷೆಯಲ್ಲಿದೆ. ಅದನ್ನು ಒದಗಿಸಿದ ನಂತರ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು.

628 (1130) ಶ್ರೀ ಗೊಪಾಲಕೃಷ್ಣ ಬೇಳೂರು ಬಿ.ಕೆ. (ಸಾಗರ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸಾಗರದಲ್ಲಿರುವ ಮಿನಿ ವಿಧಾನಸೌಧವನ್ನು ದುರಸ್ತಿಗೊಳಿಸಲು ಮಂಜೂರಾದ ಹಣವೆಷ್ಟು;

ಆ) ಇದುವರೆವಿಗೂ ಖರ್ಚಾದ ಹಾಗೂ ಉಳಿದಿರುವ ಹಣವೆಷ್ಟು; ವಿವರ ನೀಡುವುದು.

ಇ) ಈ ಮಿನಿ ವಿಧಾನಸೌಧದ ಮೇಲೆ ಇನ್ನೊಂದು ಮಹಡಿ ಕಟ್ಟಡವನ್ನು ನಿರ್ಮಿಸಲು ಉದ್ದೇಶವಿದೆಯೇ;

ಈ) ಹಾಗಿದ್ದಲ್ಲಿ, ಯಾವಾಗ ನಿರ್ಮಿಸಲಾಗುವುದು (ವಿವರ ಒದಗಿಸುವುದು)

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು) :

ಅ) ರೂ. 2.5 ಲಕ್ಷಗಳು.

ಆ) ಮಾರ್ಚ್ 2006ರವರೆಗೆ 1,88,679 ರೂ. ವೆಚ್ಚವಾಗಿದ್ದು ರೂ. 61,321 ಬಾಕಿ ಉಳಿದಿರುತ್ತವೆ.

ಇ) ಸದ್ಯಕ್ಕೆ ಈ ಪ್ರಸ್ತಾವನೆ ಇಲ್ಲ.

ಈ) ಪ್ರಶ್ನೆ ಉದ್ಭವಿಸುವುದಿಲ್ಲ.

629 (1286) ಶ್ರೀ ಗೊಪಾಲಕೃಷ್ಣ ಬೇಳೂರು ಬಿ.ಕೆ. (ಸಾಗರ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ದಿನಾಂಕ : 24–12–2005ರ ಸರ್ಕಾರದ ಸುತ್ತೋಲೆಯಲ್ಲಿ ಗೋಮಾಳ ಹಾಗೂ ಶಾಲೆಗಳಿಗೆ ಸೇರಿದ ಜಾಗಗಳ ಮಂಜೂರಾತಿಗೆ ನಿಷೇಧ ಹೇರಲಾಗಿದ್ದ ಸಾವಿರಾರು ಎಕರೆ ಜಮೀನಿನ ಮಂಜೂರಾತಿ ಪ್ರಕರಣಗಳು ಬಾಕಿ ಇರುವುದು ಗಮನಕ್ಕೆ ಬಂದಿದೆಯೇ;

ಆ) ಬಾಕಿ ಇರುವ ಪ್ರಕರಣಗಳನ್ನು ಬಗೆಹರಿಸಲು ಸರ್ಕಾರ ಕೈಗೊಂಡ ಕ್ರಮವೇನು;

ಇ) ಯಾವಾಗ ಈ ಪ್ರಕರಣಗಳನ್ನು ಬಗೆಹರಿಸಲಾಗುವುದು (ವಿವರ ನೀಡುವುದು)?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು) :

ಅ) ಹೌದು.

ಆ) ಗೌರವಾನ್ವಿತ ರಾಜ್ಯ ಉಚ್ಚ ನ್ಯಾಯಾಲಯದ ಆದೇಶಾನುಸಾರ ಕ್ರಮ ತೆಗೆದುಕೊಂಡಿದ್ದು, ಯಾವ ಯಾವ ಪ್ರಕರಣಗಳಲ್ಲಿ ಗೋಮಾಳ ಭೂಮಿಯನ್ನು ಗ್ರಾಮಾಂತರ ಸಾರ್ವಜನಿಕ ಸಮುದಾಯದ ಉಪಯೋಗಕ್ಕೆ ಮಂಜೂರು ಮಾಡಬಹುದೆಂಬುದರ ಬಗ್ಗೆ ಕಾನೂನು ಇಲಾಖೆಯ ಅಭಿಪ್ರಾಯ ಕೋರಲಾಗಿದೆ.

ಇ) ಕಾನೂನು ಇಲಾಖೆಯಿಂದ ಅಭಿಪ್ರಾಯ ಬಂದ ತಕ್ಷಣವೇ ಈ ನಿಟ್ಟಿನಲ್ಲಿ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

630 (1116) ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಜಿರಾದ್): ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಗಳಲ್ಲಿ ವಸತಿ ಮತ್ತು ವಾಣಿಜ್ಯ ಸಂಕೀರ್ಣಗಳಿಗೆ / ಮಲ್ಟಿಪ್ಲೆಕ್ಸ್‌ಗಳಿಗೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಅನುಮತಿ ಪತ್ರವನ್ನು ತೆಗೆದುಕೊಳ್ಳುವುದು ಕಡ್ಡಾಯವಲ್ಲವೇ;

ಆ) ಹಾಗಿದ್ದಲ್ಲಿ, ಕಳೆದ ಒಂದೂವರೆ ವರ್ಷಗಳಲ್ಲಿ ಮೇಲ್ಕಂಡ ಜಿಲ್ಲೆಗಳಲ್ಲಿ ಅನುಮತಿ ಪತ್ರವನ್ನು ಕೋರಿ ಎಷ್ಟು ಸಂಸ್ಥೆಗಳು ಹಾಗೂ ವ್ಯಕ್ತಿಗಳು ಅರ್ಜಿ ಸಲ್ಲಿಸಿದ್ದಾರೆ.

ಇ) ಇಲ್ಲಿಯವರೆವಿಗೆ ಎಷ್ಟು ಜನರಿಗೆ ಮತ್ತು ಸಂಸ್ಥೆಗಳಿಗೆ ಅನುಮತಿ ಪತ್ರವನ್ನು ನೀಡಲಾಗಿದೆ (ದಿನಾಂಕ 20.6.2006 ರವರೆವಿಗೆ ಅನುಮತಿ ನೀಡಿರುವ ಬಗ್ಗೆ ವಿವರಗಳನ್ನು ವ್ಯಕ್ತಿವಾರು ಮತ್ತು ಸಂಸ್ಥೆವಾರು ಅಂಕಿ ಅಂಶಗಳಲ್ಲಿ ಒದಗಿಸುವುದು);

ಈ) ಕೆಲವು ವಸತಿ ಸಂಕೀರ್ಣ ಸಂಸ್ಥೆಗಳು ಅನೇಕ ನಿಯಮಗಳನ್ನು ಉಲ್ಲಂಘನೆ ಮಾಡಿರುವುದರಿಂದ (ಉದಾ: ಗೋಪಾಲನ್ ಬಿಲ್ಡರ್ ಸಂಸ್ಥೆ) ಮಂಡಳಿಯು ಅನುಮತಿಯನ್ನು ನಿರಾಕರಿಸಿದ್ದರೂ ಸಹ ಕಾಮಗಾರಿಯನ್ನು ಮುಂದುವರಿಸಿರುವುದು ನಿಜವೇ;

ಉ) ಹಾಗಿದ್ದಲ್ಲಿ, ಇಂತಹ ಸಂಸ್ಥೆಗಳ ವಿರುದ್ಧ ಕೈಗೊಂಡಿರುವ ಕ್ರಮಗಳೇನು (ನಿಯಮಗಳನ್ನು ಉಲ್ಲಂಘನೆ ಮಾಡಿರುವ ಸಂಸ್ಥೆಗಳ ವಿವರಗಳನ್ನು ಒದಗಿಸುವುದು)

ಊ) ಮೇಲ್ಕಂಡ ಯೋಜನೆಗಳ ಪೈಕಿ ಎಷ್ಟು ಯೋಜನೆಗಳಲ್ಲಿ ಇ.ಐ.ಎ. (ಎನ್‌ವಿರಾನ್‌ಮೆಂಟ್ ಇಂಪ್ಯಾಕ್ಟ್ ಅಸೆಸ್‌ಮೆಂಟ್) ಮಾಡಿಸಲು ಸೂಚಿಸಲಾಗಿದೆ ಹಾಗೂ ಇವುಗಳನ್ನು ಯಾವ ಯಾವ ಸಂಸ್ಥೆಗಳಿಗೆ ನೀಡಲಾಗಿದೆ;

ಋ) ಇ.ಐ.ಎ. ಮಾಡುವ ಬಹುತೇಕ ಸಂಸ್ಥೆಗಳು ಮತ್ತು ಲ್ಯಾಬೋರೇಟರಿಗಳು ಮಂಡಳಿಯಿಂದ ನೋಂದಣಿ ಇಲ್ಲದೆ ಹಾಗೂ ಸ್ವಂತ ಕಛೇರಿಯನ್ನೂ ಸಹ ಹೊಂದದೆ ನಕಲಿ ಸಂಸ್ಥೆಗಳಾಗಿರುವುದು ನಿಜವೇ;